**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10023/2018**

**ಚಾಸಾ ಃ 08**

**ಪ್ರಾಸಾ ಃ 09**

| | | |
|---|---|---|
| **ಹೆಸರು** | **ಃ** | **ರಘುನಾಥ್** |
| **ತಂದೆಯ ಹೆಸರು** | **ಃ** | **ಓಬಳೇಶ್** |
| **ವಯಸ್ಸು** | **ಃ** | **39 ವರ್ಷ** |
| **ವೃತ್ತಿ** | **ಃ** | **ಖಾಸಗಿ ಫ್ಯಾಕ್ಟರಿ** |
| **ವಾಸ** | **ಃ** | **ಕೆಂಪೇಗೌಡ ನಗರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 23.01.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ 1 ಶಶಿಕುಮಾರ್ ಮತ್ತು ಚಾಸಾ 3 ಶ್ರೀಮತಿ ರಾಜಮ್ಮ ಗೊತ್ತಿಲ್ಲ. ಈಗ ನೋಡಿದ ನಿಪಿ 6 ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ-6ಸಿ ಎಂದು ಗುರುತಿಸಲಾಯಿತು. ಸುಮಾರು 4-5 ವರ್ಷಗಳ ಹಿಂದೆ ಪೋಲೀಸು ಠಾಣೆಯಲ್ಲಿ ಆ ಸಹಿಯನ್ನು ಮಾಡಿದ್ದೆ. ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಈಗ ನನಗೆ ತೋರಿಸಿದ ಮು.ಮಾ 3 ಮತ್ತು 4 ವಸ್ತುಗಳನ್ನು ಆ ದಿನ ನಾನು ನೋಡಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ**

2. ದಿಃ 09.11.2016 ರಂದು ಬೆಳಗ್ಗೆ 10.45 ಗಂಟೆಗೆ ಚಾಸಾ3 ರಾಜಮ್ಮನವರು ಠಾಣೆಗೆ ಹಾಜರಾಗಿ ಗಾಯಾಳು ರಘುರವರು ಕೃತ್ಯದ ಸಮಯ ಧರಿಸಿದ್ದ ಮು.ಮಾ 3 ಮತ್ತು 4 ರಕ್ತಕಲೆಯಾಗಿದ್ದ ಬಟ್ಟೆಗಳನ್ನು ತಂದು ಹಾಜರು ಪಡಿಸಿದ್ದು ಸದರಿ ಬಟ್ಟೆಗಳನ್ನು ಪೋಲೀಸರು

ಬಿಳಿ ಚೀಲದಲ್ಲಿ ಹಾಕಿ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಾಗ ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನಿಪಿ-6ಸಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ**

ಇಲ್ಲ.

**ಮರು ವಿಚಾರಣೆ** ಃ

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**ಎಸ್.ಸಿ. ನಂಃ 10023/2018**

**ಚಾಸಾ ಃ 07**

**ಪ್ರಾಸಾ ಃ 08**

| | | |
|---|---|---|
| **ಹೆಸರು** | **ಃ** | **ಶಿವಕುಮಾರ್** |
| **ತಂದೆಯ ಹೆಸರು** | **ಃ** | **ಗಂಗಪ್ಪ** |
| **ವಯಸ್ಸು** | **ಃ** | **30 ವರ್ಷ** |
| **ವೃತ್ತಿ** | **ಃ** | **ಕೂಲಿ** |
| **ವಾಸ** | **ಃ** | **ಆಲಹಳ್ಳಿ , ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 23.01.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ 1 ಶಶಿಕುಮಾರ್ ಮತ್ತು ಚಾಸಾ 3 ಶ್ರೀಮತಿ ರಾಜಮ್ಮ ಗೊತ್ತಿಲ್ಲ. ಈಗ ನೋಡಿದ ನಿಪಿ5 ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ-5ಸಿ ಎಂದು ಗುರುತಿಸಲಾಯಿತು. ಅದೇ ರೀತಿ ನಿಪಿ6 ಪಂಚನಾಮೆಯಲ್ಲೂ ಸಹ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ-6ಬಿ ಎಂದು ಗುರುತಿಸಲಾಯಿತು. ಸುಮಾರು 4-5 ವರ್ಷಗಳ ಹಿಂದೆ ಪೋಲೀಸು ಠಾಣೆಯಲ್ಲಿ ಆ ಸಹಿಗಳನ್ನು ಮಾಡಿದ್ದೆ. ಆ ದಾಖಲೆಗಳಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಶ್ರೀನಗರದ ಯಾವುದೇ ಮನೆಗೆ ನನ್ನನ್ನು ಆ ದಿನ ಪೋಲೀಸರು ಕರೆದುಕೊಂಡು ಹೋಗಿರಲಿಲ್ಲ. ಈಗ ನನಗೆ ತೋರಿಸಿದ ಮು.ಮಾ 3 ರಿಂದ 5 ವಸ್ತುಗಳನ್ನು ಆ ದಿನ ನಾನು ನೋಡಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ**

2. ದಿ: 12.10.2016 ರಂದು ಮದ್ಯಾಹ್ನ 2.30 ಗಂಟೆಗೆ ಪೋಲೀಸರು ಕೃತ್ಯ ನಡೆದ ಸ್ಥಳವಾದ ಚಾಸಾ-3 ರಾಜಮ್ಮನವರ ಮನೆಯ ಬಳಿ ಮಹಜರ್ ಕ್ರಮ ಜರುಗಿಸಲು ಬಂದಾಗ ನಾನು ಪಂಚರಾಗಿ ಸಹಕರಿಸಲು ಒಪ್ಪಿ ಅವರ ಮನೆ ಬಳಿ ಹೋಗಿದ್ದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಜಾಗವನ್ನು ಪೋಲೀಸರಿಗೆ ಚಾಸಾ-3 ತೋರಿಸಿದಾಗ ಬಾಗಿಲಿನ ಬಳಿ ಮತ್ತು ಸಿಮೆಂಟ್ ನೆಲದ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಬಿದ್ದಿದ್ದು, ಸದರಿ ರಕ್ತದ ಮಾದರಿಯನ್ನು ಹತ್ತಿಯಲ್ಲಿ ಪೋಲೀಸರು ಸಂಗ್ರಹಿಸಿದ್ದ ಮು.ಮಾ 5 ಹತ್ತಿ ಚೂರುಗಳನ್ನು ಅಮಾನತ್ತು ಪಡಿಸಿಕೊಂಡು ಬರೆದ ನಿಪಿ-5 ಪಂಚನಾಮೆಯಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

3. ದಿ: 09.11.2016 ರಂದು ಬೆಳಗ್ಗೆ 10.45 ಗಂಟೆಗೆ ಚಾಸಾ3 ರಾಜಮ್ಮನವರು ಠಾಣೆಗೆ ಹಾಜರಾಗಿ ಗಾಯಾಳು ರಘುರವರು ಕೃತ್ಯದ ಸಮಯ ಧರಿಸಿದ್ದ ಮು.ಮಾ 3 ಮತ್ತು 4 ರಕ್ತಕಲೆಯಾಗಿದ್ದ ಬಟ್ಟೆಗಳನ್ನು ತಂದು ಹಾಜರು ಪಡಿಸಿದ್ದು ಸದರಿ ಬಟ್ಟೆಗಳನ್ನು ಪೋಲೀಸರು ಬಿಳಿ ಚೀಲದಲ್ಲಿ ಹಾಕಿ ಮೊಹರು ಮಾಡಿ ಅಮಾನತ್ತು ಪಡಿಸಿಕೊಂಡಾಗ ನಾನು ಎಲ್ಲಾ ವಿಚಾರಗಳನ್ನು ತಿಳಿದುಕೊಂಡು ನಿಪಿ-6ಬಿ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ :</u>**

ಇಲ್ಲ.

**<u>ಮರು ವಿಚಾರಣೆ :</u>**

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ 10023/2018**

**ಚಾಸಾ ಃ 06**

**ಪ್ರಾಸಾ ಃ 07**

| | | |
|---|---|---|
| **ಹೆಸರು** | **ಃ** | **ಕೆ ಮುನಿರಾಜು** |
| **ತಂದೆಯ ಹೆಸರು** | **ಃ** | **ಕೃಷ್ಣಪ್ಪ** |
| **ವಯಸ್ಸು** | **ಃ** | **41 ವರ್ಷ** |
| **ವೃತ್ತಿ** | **ಃ** | **ಕೂಲಿ** |
| **ವಾಸ** | **ಃ** | **ಚಿಕ್ಕಬಳ್ಳಾಪುರ** |

**ಈ ದಿನ ದಿನಾಂಕಃ 23.01.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಚಾಸಾ 1 ಶಶಿಕುಮಾರ್ ಮತ್ತು ಚಾಸಾ 3 ಶ್ರೀಮತಿ ರಾಜಮ್ಮ ಗೊತ್ತಿಲ್ಲ. ಈಗ ನೋಡಿದ ನಿಪಿ5 ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಸಾಕ್ಷಿದಾರರ ಸಹಿಯನ್ನು ನಿಪಿ5ಬಿ ಎಂದು ಗುರುತಿಸಲಾಯಿತು. ಸುಮಾರು 4-5 ವರ್ಷಗಳ ಹಿಂದೆ ಪೋಲೀಸು ಠಾಣೆಯಲ್ಲಿ ಆ ಸಹಿಯನ್ನು ಮಾಡಿದ್ದೆ. ಆ ದಾಖಲೆಯಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ. ಶ್ರೀನಗರದ ಯಾವುದೇ ಮನೆಗೆ ನನ್ನನ್ನು ಆ ದಿನ ಪೋಲೀಸರು ಕರೆದುಕೊಂಡು ಹೋಗಿರಲಿಲ್ಲ. ಈಗ ನನಗೆ ತೋರಿಸಿದ ಮು.ಮಾ 5 ರಕ್ತ ಕಲೆಯಾಗಿರುವ ಹತ್ತಿ ಆ ದಿನ ನಾನು ನೋಡಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜಕರವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)**

**ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದ ಃ**

2. ದಿಃ 12.10.2016 ರಂದು ಮದ್ಯಾಹ್ನ 2.30 ಗಂಟೆಗೆ ಪೋಲೀಸರು ಕೃತ್ಯ ನಡೆದ ಸ್ಥಳವಾದ ಚಾಸಾ-3 ರಾಜಮ್ಮನವರ ಮನೆಯ ಬಳಿ ಮಹಜರ್ ಕ್ರಮ ಜರುಗಿಸಲು ಬಂದಾಗ

ನಾನು ಪಂಚರಾಗಿ ಸಹಕರಿಸಲು ಒಪ್ಪಿ ಅವರ ಮನೆ ಬಳಿ ಹೋಗಿದ್ದೆ ಎಂದರೆ ಸರಿಯಲ್ಲ. ಕೃತ್ಯ ನಡೆದ ಜಾಗವನ್ನು ಪೋಲೀಸರಿಗೆ ಚಾಸಾ-3 ತೋರಿಸಿದಾಗ ಬಾಗಿಲಿನ ಬಳಿ ಮತ್ತು ಸಿಮೆಂಟ್ ನೆಲದ ಮೇಲೆ ಅಲ್ಲಲ್ಲಿ ರಕ್ತದ ಕಲೆಗಳು ಬಿದ್ದಿದ್ದು, ಸದರಿ ರಕ್ತದ ಮಾದರಿಯನ್ನು ಹತ್ತಿಯಲ್ಲಿ ಪೋಲೀಸರು ಸಂಗ್ರಹಿಸಿದ್ದ ಮು.ಮಾ 5 ಹತ್ತಿ ಚೂರುಗಳನ್ನು ಅಮಾನತ್ತು ಪಡಿಸಿಕೊಂಡು ಬರೆದ ನಿಪಿ-5 ಪಂಚನಾಮೆಯಲ್ಲಿರುವ ವಿಚಾರಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿಗಳ ಪರ ವಕೀಲರವರಿಂದ ಃ**

ಇಲ್ಲ.

**ಮರು ವಿಚಾರಣೆ ಃ**

ಇಲ್ಲ.

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ